<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 274/2024**

| ಸಾಕ್ಷಿಯ ಹೆಸರು | ಶ್ರೀ. ದೇವರಾಜು | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಮಾದಪ್ಪ | 1 | 3 |
| ವಯಸ್ಸು | 70 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **02.03.2026.** | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಗಿರಿಗೌಡನದೊಡ್ಡಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನನಗೆ ಆರೋಪಿತರ ಪರಿಚಯ ಇದೆ. ಅವರು ನಮ್ಮ ಊರಿನವರು. ಚಾಸಾ. 2 ರವರು ನನ್ನ ಮಗ. ಚಾಸಾ. 3 ರಿಂದ 7 ರವರ ಪರಿಚಯ ಇದೆ. ಈಗ್ಗೆ 1 ವರ್ಷದ ಮೇಲೆ ನಾನು ರಾತ್ರಿ 9.00 ಕ್ಕೆ ಮನೆಯಲ್ಲಿ ಇದ್ದಾಗ ಸುರೇಶ್, ಮಹೇಶ್ ಮತ್ತು ಬ್ಯಾಟರಾಜು ರವರು ಬಂದು ನನ್ನ ಮಗನಿಗೆ ಹೊಡೆದು ಊರಿನಲ್ಲಿ ಉರುಳಿಸಿದ್ದಾರೆ ಎಂದು ತಿಳಿಸಿದರು. ಎಲ್ಲಾ ಆರೋಪಿತರು ಹೊಡೆದಿದ್ದಾರೆ ಎಂದು ಹೇಳಿದ್ದರು. ನಮ್ಮ ಊರಿನ ಸರ್ಕಾರಿ ರಸ್ತೆಯಲ್ಲಿ ಹೊಡೆದು ಹಾಕಿದ್ದರು ಎಂದು ಗೊತ್ತಾದ ತಕ್ಷಣ ನಾನು ಒಬ್ಬನೇ ಅಲ್ಲಿಗೆ ಹೋದೆ. ನನ್ನ ಮಗನಿಗೆ ಬಾಯಿಗೆ ನೀರು ಬಿಡೋಣಾ ಎಂದು ನೀರನ್ನು ಕೇಳಿದಾಗ ಆರೋಪಿತರು ಯಾರು ಕೊಡಬೇಡಿ ಎಂದು ಗಲಾಟೆ ಮಾಡಿದರು. ನಂತರ ಪೊಲೀಸರು ಬರಲಿ ಎಂದು ಕಾಯುತ್ತಿದ್ದೆವು. ನಂತರ ಪೊಲೀಸರು ಬಂದು ಹೇಳಿದ ನಂತರ ದಯಾನಂದ ಆಸ್ಪತ್ರೆಗೆ ನನ್ನ ಮಗನನ್ನು ಸೇರಿಸಿದ್ದೆವು. ನಂತರ ಕಗ್ಗಲಿಪುರ ಠಾಣೆಗೆ ಬಂದು ದೂರು ನೀಡಿದ್ದೆವು. ಈಗ ಓದಿ ಹೇಳಿದ ದೂರಿಗೆ ಹೆಬ್ಬೆಟ್ಟಿನ ರುಜು ಮಾಡಿರುತ್ತೇನೆ. ಅದನ್ನು ನಿಶಾನೆ.ಪಿ. 4 ಎಂದು ಗುರುತಿಸಲಾಯಿತು.

2. ನಂತರ ಪೊಲೀರು ಸ್ಥಳಕ್ಕೆ ಬಂದು ಏನು ಮಾಡಿದರು ಎಂದು ಗೊತ್ತಿಲ್ಲ. ನನ್ನ ಮಗನ ಸೊಂಟದ ಮೂಳೆ ಮುರಿದಿದ್ದರು. ಆತನಿಗೆ ಈಗಲೂ ಕೆಲಸ ಹಾಗೂ ಊಟ ಮಾಡಲು ಆಗುವುದಿಲ್ಲ. ದಯಾನಂದ ಆಸ್ಪತ್ರೆಯಲ್ಲಿ ಒಂದು ವಾರ ಇದ್ದೆವು, ನಂತರ ಕೆಂಪ್ವೇಗೌಡ ಆಸ್ಪತೆಗೆ ದಾಖಲು ವಾಡಿದ್ದು ಅಲ್ಲಿ ಒಂದು ವಾರ ಇಟ್ಟುಕೊಂಡಿದ್ದರು.

(ಈ ಸಾಕ್ಷಿಯನ್ನು ಅಭಿಯೋಜಕರು ಭಾಗಶಃ ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 19.04.2024 ರಂದು ಗಲಾಟೆಯಾಗಿತ್ತು ಎಂದರೆ ಗೊತ್ತಿಲ್ಲ. ಆರೋಪಿತರ ಎಲ್ಲರೂ ಸೇರಿ ಪ್ಲಾ ಸ್ಟಿಕ್ ಪೈಪ್ ಮತ್ತು ದೊಣ್ಣೆ ಹಲ್ಲೆ ಮಾಡಿದ್ದರು ಎಂದರೆ ಸರಿ. ದಿನಾಂಕ 20.04.2024 ಕ್ಕೆ ಮಧ್ಯಾಹ್ನ 2.00 ಕ್ಕೆ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಅಲ್ಲಿ ಪೊಲೀಸರು ಮಹಜರ್ ಮಾಡಿ ಎರಡು ಪ್ಲಾಸ್ಟಿಕ್ ಪೈಪ್ ಗಳು, ಒಂದು ದೊಣ್ಣೆ, ಒಂದು ಕಲ್ಲು, ನನ್ನ ಮಗನ ರಕ್ತ ಕಲೆಯಾದ ಶರ್ಟ ಅನ್ನು ವಶಕ್ಕೆ ಪಡೆದರು ಎಂದರೆ ಸರಿ. ಪೊಲೀಸರಿಗೆ ನಾನ ಘಟನಾ ಸ್ಥಳವನ್ನು ತೋರಿಸಿದ್ದೆ ಎಂದರೆ ಸರಿ. ನಿಶಾನೆ.ಪಿ. 2. ಮಹಜರ್ ನಲ್ಲಿ ಫೋಟೋವನ್ನು ಸಾಕ್ಷಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ್ದು ಎರಡು ಪ್ಲಾಸ್ಟಿಕ್ ಪೈಪ್ ಗಳು, ಒಂದು ದೊಣ್ಣೆ, ಎರಡು ಹಿಡಿಗಾತ್ರದ ಕಲ್ಲು, ನನ್ನ ಮಗನ ರಕ್ತ ಕಲೆಯಾದ ಶರ್ಟ ಅನ್ನು ಸಾಕ್ಷಿ ಗುರುತಿಸಿದ್ದು ಎರಡು ಪ್ಲಾಸ್ಟಿಕ್ ಪೈಪ್ ಗಳು ಮು.ಮಾ. 1 ಮತ್ತು 2 ಎಂದು, ಒಂದು ದೊಣ್ಣೆ ಮು.ಮಾ. 3 ಎಂದು, ಒಂದು ಕಲ್ಲನ್ನು ಮು.ಮಾ. 4 ಎಂದು ಮತ್ತು ರಕ್ತ ಕಲೆಯಾದ ಶರ್ಟ ಅನ್ನು ಮು.ಮಾ. 5 ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಸುದರ್ಶನ್ ಮತ್ತು ಸಿದ್ದಪ್ಪ ಹಾಜರು ಇದ್ದರು ಎಂದರೆ ಸರಿ. ಅವರುಗಳು ಮಹಜರ್ ಸೆ ಸಹಿ ಮಾಡಿರುತ್ತಾರೆ. ನಾನು ಮಹಜರ್ ಗೆ ಹೆಬ್ಬೆಟ್ಟಿನ ರುಜು ಮಾಡಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ : SSG ವಕೀಲರಿಂದ : ಸಮಯ ಕೋರಿದ್ದು, ರೂಪಾಯಿ 500/- ಖರ್ಚಿನೊಂದಿಗೆ ಮುಂದೂಡಲಾಯಿತು.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.